Email: cep@bwssb.org

Tele fax: 080-22945108

ದೂರವಾಣಿ/ಫ್ಯಾಕ್ಸ್: 080–22945108

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಮುಖ್ಯ ಅಭಿಯಂತರರು(ಯೋಜನೆ) ರವರ ಕಛೇರಿ, 3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009

ಸಂ:ಬೆಂಜಮಂ/ಮು.ಅ(ಯೋ)/ಅಮುಅ(ಯೋ)/110 ಹಳ್ಳಿಗಳು/344/2018-19

ದಿನಾಂಕ: 07.06.2018

## ಜ್ಞಾಪನಾ ಪತ್ರ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳಲ್ಲಿ ಪ್ರಸ್ತುತ 7 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಕುರಿತು.

ಕರ್ನಾಟಕ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವ 110 ಹಳ್ಳಿಗಳಿಗೆ ರೂ.1886.00 ಕೋಟಿ ಅಂದಾಜು ವೆಚ್ಚದ ಕುಡಿಯುವ ನೀರಿನ ಯೋಜನೆಗೆ ತನ್ನ ಆದೇಶ ಸಂಖ್ಯೆ.ನಅಇ 11 ಎಂಎನ್‌ಐ 2015 ಬೆಂಗಳೂರು ದಿನಾಂಕ: 18.10.2016 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳನ್ನು ಮಹದೇವಪುರ ವಲಯ, ಆರ್.ಆರ್.ನಗರ ವಲಯ, ಬ್ಯಾಟರಾಯನಪುರ ವಲಯ, ಬೊಮ್ಮನಹಳ್ಳಿ ವಲಯ ಹಾಗೂ ದಾಸರಹಳ್ಳಿ ವಲಯ ಎಂದು 5 ವಲಯಗಳಾಗಿ ವಿಂಗಡಿಸಿ, ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, 24 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

110 ಹಳ್ಳಿಗಳಲ್ಲಿ ಕೈಗೊಂಡಿರುವ ಎಲ್ಲಾ ಕಾಮಗಾರಿಗಳು ತ್ವರಿತಗತಿಯಲ್ಲಿ ಸಾಗುತ್ತಿದ್ದು, ಈಗಾಗಲೇ 10 ಹಳ್ಳಿಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಮುಂದುವರೆದಂತೆ, ಪ್ರಸ್ತುತ ಈ ಕೆಳಕಂಡ 7 ಹಳ್ಳಿಗಳಿಗೆ ಮಾರ್ಚ್ ಮೊದಲ ವಾರದಿಂದ ಕುಡಿಯುವ ನೀರನ್ನು ಸರಬರಾಜು ಮಾಡಲು ನಿರ್ಧರಿಸಲಾಗಿರುತ್ತದೆ.

| Sl No | Areas | Ward No. | Division | Name Phone No. EEs | Name Phone No. AEEs |
|---|---|---|---|---|---|
| 1. | Ganakallu (P) | 198 | EE(CMC)-12<br>Anand Rao Circle | Rangaswamy<br>9845444132 | Gangalakshmamma<br>9972438647 |
| 2. | Uttarahalli (P) | 184 | EE(CMC)-12<br>Anand Rao Circle | Rangaswamy<br>9845444132 | Gangalakshmamma<br>9972438647 |
| 3. | Tubarahalli | 85 | EE(CMC)-13<br>Anand Rao Circle | Ramakrishna K.R<br>9845444012 | Prakash V<br>9945233444 |
| 4. | Siddapura (P) | 84 | EE(CMC)-13<br>Anand Rao Circle | Ramakrishna K.R<br>9845444012 | Prakash V<br>9945233444 |
| 5. | Chikkabettahalli (P) | 3 | EE(CMC)-14<br>Malleshwaram 18th Cross | Narayana Swamy.C<br>9886179260 | Satish Reddy<br>9611302106 |
| 6. | Begur | 192 | EE(CMC)-15 Jayanagara,<br>4th Block, Kapila Bhavan | B.S.Dalayath<br>9845444097 | Manjunath M.N.<br>9591874457 |
| 7. | Haraluru (P) | 151 | EE(CMC)-15 Jayanagara,<br>4th Block, Kapila Bhavan | B.S.Dalayath<br>9845444097 | Manjunath M.N.<br>9591874457 |

ಅಲ್ಲಿರುವ ಸ್ಥಳೀಯರು ಬೆಂಗಳೂರು ಜಲಮಂಡಳಿಯಿಂದ ಕುಡಿಯುವ ನೀರಿನ ಸಂಪರ್ಕ ಪಡೆಯಲು ಇಚ್ಛಿಸಿದಲ್ಲಿ ಸಾರ್ವಜನಿಕರು ನೀರಿನ ಸಂಪರ್ಕ ಪಡೆಯಲು ಆನ್‌ಲೈನ್‌ನಲ್ಲಿ ನೇರವಾಗಿ www.bwssb.gov.in ಲಾಗಿನ್ ಆಗುವುದರ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿಯ ಜೊತೆ ಅವಶ್ಯವಿರುವ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ಮೇಲೆ ತಿಳಿಸಿರುವ ಅಧಿಕಾರಿಗಳನ್ನು ಸಂಪರ್ಕಿಸಿ ಸಹಾಯ ಪಡೆಯಬಹುದಾಗಿದೆ.

ಇದಲ್ಲದೆ ಕಾವೇರಿ ಭವನದ ಕೇಂದ್ರ ಕಛೇರಿಯಲ್ಲಿಯೂ (4ನೇ ಮಹಡಿ) ಸಹ ಗ್ರಾಹಕರಿಗೆ ಆನ್‌ಲೈನ್ ವ್ಯವಸ್ಥೆಯಲ್ಲಿ ಅರ್ಜಿ ಸಲ್ಲಿಸಲು ಸಹಾಯವಾಣಿ ಕೇಂದ್ರ ಇರುತ್ತದೆ ಅದರಲ್ಲಿಯೂ ಸಹ ಸೌಲಭ್ಯವನ್ನು ಪಡೆಯಬಹುದು.

ಮುಖ್ಯ ಅಭಿಯಂತರರು(ಯೋಜನೆ)